**ಮೈಸೂರು ವಿಶ್ವವಿದ್ಯಾನಿಲಯ**

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ದಿನಾಂಕ : 19ನೇ ಡಿಸೆಂಬರ್ 2019
E.mail-dir.deptofphyedn@gmail.com
Ph. No. 0821-2419288

ಸಂ : ದೈ.ಶಿ.ವಿ./613/ಅಂ.ಕಾ.ಅಂ.ವ.ಮ.ಕ್ರೀ.ಕೂ./2019-2020

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

ಮಾನ್ಯರೆ,

*ವಿಷಯ* : 2019-2020ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾ ಕೂಟದ ಬಗ್ಗೆ.

* * * * *

ದಿನಾಂಕ 28-01-2020ರಿಂದ 30-01-2020ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾ ಕೂಟವನ್ನು **ಭಾರತಿ ಕಾಲೇಜು, ಭಾರತಿನಗರ, (ಕೆ.ಎಂ.ದೊಡ್ಡಿ) ಮಂಡ್ಯ ಜಿಲ್ಲೆ** ಇವರ ಆಶ್ರಯದಲ್ಲಿ ನಡೆಸುತ್ತಿರುವುದಾಗಿ ತಿಳಿಸಲು ಹರ್ಷಿಸುತ್ತಾ, ದಿನಾಂಕ : 10-01-2020 ರಂದು ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ಅವಧಿಯೊಳಗೆ ಲಗತ್ತಿಸಿರುವ ಪ್ರವೇಶ ಪತ್ರವನ್ನು **ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು** ಇವರಿಗೆ ಕಳುಹಿಸಬೇಕಾಗಿ ವಿನಂತಿ. ದಿನಾಂಕ : 16-01-2020ರಂದು ಬೆಳಗ್ಗೆ 11-30ಕ್ಕೆ ನಿರ್ದೇಶಕರ ಕೊಠಡಿಯಲ್ಲಿ ತಳಕು ಪಟ್ಟಿಯನ್ನು ಹಾಕಲಾಗುವುದು.

ಹೊರಗಡೆಯಿಂದ ಬರುವ ತಂಡಗಳಿಗೆ **ಭಾರತಿ ಕಾಲೇಜು, ಭಾರತಿನಗರ, (ಕೆ.ಎಂ.ದೊಡ್ಡಿ) ಮಂಡ್ಯ ಜಿಲ್ಲೆ** ಇಲ್ಲಿ ದಿನಾಂಕ : 27-01-2020ರ ಬೆಳಗ್ಗೆ 11-00 ಘಂಟೆಯ ನಂತರ ಠೇವಣಿ ಹಣ ರೂ. 500/- ಪಡೆದು ವಸತಿ ಸೌಕರ್ಯವನ್ನು ನೀಡಲಾಗುವುದು ಮತ್ತು ಸದರಿ ಹಣವನ್ನು ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ, ವಸತಿಯನ್ನು ತೆರವುಗೊಳಿಸಿದ ನಂತರ ಹಿಂದಿರುಗಿಸಲಾಗುವುದು. ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ : 28-01-2020 ರಂದು ಬೆಳಗ್ಗೆ 9-30 ಘಂಟೆಗೆ **ಭಾರತಿ ಕಾಲೇಜು, ಭಾರತಿನಗರ, (ಕೆ.ಎಂ.ದೊಡ್ಡಿ) ಮಂಡ್ಯ ಜಿಲ್ಲೆ** ಇಲ್ಲಿ ಕರೆಯಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನೀಡಿರುವ ನಮೂನೆಯಲ್ಲಿ ಕ್ರೀಡಾಪಟುವಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಮೇಲು ಸಹಿ ಮತ್ತು ಮೊಹರು ಇರುವ ಗುರುತಿನ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು 2019-20ನೇ ಸಾಲಿನಿಂದ ಅಂತರ ವಿಶ್ವವಿದ್ಯಾನಿಲಯ ಕ್ರೀಡಾಕೂಟದಲ್ಲಿ ಅನುಸರಿಸುವ ನಿಯಮಗಳನ್ನು ಯತಾವತ್ತಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಅಳವಡಿಸಿಕೊಂಡಿರುವುದರಿಂದ ಭಾಗವಹಿಸುವ ಎಲ್ಲಾ ಕಾಲೇಜಿನ ಕ್ರೀಡಾಪಟುಗಳು ಸದರಿ ನಿಯಮಕ್ಕೆ ಅನುಗುಣವಾಗಿ ಭಾಗವಹಿಸಲು ಸೂಚಿಸಲಾಗಿದೆ ಹಾಗೂ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವ ಎಲ್ಲಾ ತಂಡದ ಕ್ರೀಡಾಪಟುಗಳು ಕಾಲೇಜಿನ ಸಮವಸ್ತ್ರ ಮತ್ತು ಕಾಲೇಜಿನ ಧ್ವಜದೊಂದಿಗೆ ದಿನಾಂಕ : 28-01-2020 ರ ಬೆಳಗ್ಗೆ 8-30 ಘಂಟೆಗೆ **ಭಾರತಿ ಕಾಲೇಜು, ಭಾರತಿನಗರ, (ಕೆ.ಎಂ.ದೊಡ್ಡಿ) ಮಂಡ್ಯ ಜಿಲ್ಲೆ** ಇಲ್ಲಿ ಜರುಗಲಿರುವ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ನಿರ್ದೇಶನ ನೀಡಬೇಕಾಗಿ ವಿನಂತಿ.

**ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಿಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಅಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲು ಕೋರಲಾಗಿದೆ.**

**ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾ ತಂಡಗಳಿಗೆ ತಂಡದ ವ್ಯವಸ್ಥಾಪಕರು/ಕ್ರೀಡಾ ಕಾರ್ಯದರ್ಶಿಗಳು ಕ್ರೀಡಾ ತಂಡಗಳೊಡನೆ ಕಡ್ಡಾಯವಾಗಿ ಹಾಜರಿರತಕ್ಕದ್ದು. ವ್ಯವಸ್ಥಾಪಕರು ಇಲ್ಲದ ತಂಡಗಳನ್ನು ಕ್ರೀಡಾಕೂಟದಲ್ಲಿ ಭಾಗವಹಿಸಲು ಅನುಮತಿ ನೀಡುವುದಿಲ್ಲ.**

ತಮ್ಮ ಕಾಲೇಜಿನ ತಂಡದ ವ್ಯವಸ್ಥಾಪಕರು ಮತ್ತು ಕ್ರೀಡಾಪಟುಗಳಿಗೆ ಮೇಲಿನ ಸೂಚನೆಗಳು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಸದರಿ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಯಲು ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
19/12/2019
(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು
ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ

ಪ್ರತಿಗಳನ್ನು ವಂದನಾಪೂರ್ವಕವಾಗಿ :

1. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು ನಿರ್ದೇಶಕರಿಗೆ ದಿನಾಂಕ : 16-01-2019 ರೊಳಗೆ ತಲುಪಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

## ಪ್ರವೇಶ ಪತ್ರ

ಗೆ,

**ಸಂಪರ್ಕದ ವಿವರ :**
ಕಛೇರಿ ದೂರವಾಣಿ : (0821) 2419288

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-5

ಮಾನ್ಯರೆ,

2019-20ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾ ಕೂಟದಲ್ಲಿ ಈ ಕೆಳಗೆ ಟಿಕ್ ( ✔ ) ಮಾಡಿರುವ ಕ್ರೀಡೆಗಳಲ್ಲಿ ........................................................................................................ ಕಾಲೇಜಿನ ತಂಡಗಳ ಪ್ರವೇಶವನ್ನು ಸ್ವೀಕರಿಸಬೇಕಾಗಿ ವಿನಂತಿ.

| ಕ್ರ.ಸಂ. | ಚಟುವಟಿಕೆ | | ಕ್ರ.ಸಂ. | ಚಟುವಟಿಕೆ | |
|---|---|---|---|---|---|
| 1. | ಬ್ಯಾಸ್ಕೆಟ್‌ಬಾಲ್ | | 6. | ಸಾಫ್ಟ್‌ಬಾಲ್ | |
| 2. | ಚೆಸ್ | | 7. | ಟೇಬಲ್ ಟೆನ್ನಿಸ್ | |
| 3. | ಹ್ಯಾಂಡ್‌ಬಾಲ್ | | 8. | ಟೆನ್ನಿಸ್ | |
| 4. | ಹಾಕಿ | | | | |
| 5. | ಖೋ-ಖೋ | | | | |

ದೈಹಿಕ ಶಿಕ್ಷಣ ನಿರ್ದೇಶಕರು/
ಕ್ರೀಡಾ ಕಾರ್ಯದರ್ಶಿ ಸಹಿ

ಪ್ರಾಂಶುಪಾಲರ ಸಹಿ
ಮತ್ತು ಕಾಲೇಜಿನ ಮೊಹರು

**ಸೂಚನೆ** :
1) ಪ್ರವೇಶ ಸ್ವೀಕರಿಸಲು 2019-2020ನೇ ಸಾಲಿನ ಪಂದ್ಯಾವಳಿಗಳಿಗೆ ಪ್ರವೇಶವನ್ನು ಪಾವತಿಸಿದ ಬಗ್ಗೆ ವಲಯ ಸಂಚಾಲಕರಿಂದ ಪಡೆದ ರಶೀತಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.
2) **ಪ್ರವೇಶ ಸ್ವೀಕರಿಸಲು ಕಡೆಯ ದಿನಾಂಕ : 10-01-2020**
3) ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾ ತಂಡಗಳ ಪ್ರವೇಶವನ್ನು ಮಾತ್ರ ನೀಡಲು ಕೋರಲಾಗಿದೆ ಹಾಗೂ ಪ್ರವೇಶ ನೀಡಿದ ಕ್ರೀಡಾ ತಂಡಗಳು ಕಡ್ಡಾಯವಾಗಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಸೂಚಿಸಲಾಗಿದೆ.
4) 2019-20ನೇ ಸಾಲಿನಿಂದ ಅಂತರ ವಿಶ್ವವಿದ್ಯಾನಿಲಯ ಕ್ರೀಡಾಕೂಟದಲ್ಲಿ ಅನುಸರಿಸುವ ನಿಯಮಗಳನ್ನು ಯತಾವತ್ತಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಅಳವಡಿಸಿಕೊಂಡಿರುವುದರಿಂದ ಭಾಗವಹಿಸುವ ಎಲ್ಲಾ ಕಾಲೇಜಿನ ಕ್ರೀಡಾಪಟುಗಳು ಸದರಿ ನಿಯಮಕ್ಕೆ ಅನುಗುಣವಾಗಿ ಭಾಗವಹಿಸಲು ಸೂಚಿಸಲಾಗಿದೆ.